ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	707(750)
ಸದಸ್ಯರ ಹೆಸರು	:	ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	20.12.2021
ಉತ್ತರಿಸುವವರು	:	ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಕಾಡ್ಗಿಚ್ಚಿನಿಂದ ಕಾಡು ನಾಶವಾದ ಪ್ರಕರಣಗಳ ಸಂಖ್ಯೆ ಎಷ್ಟು? ನಾಶಗೊಂಡ ಮರಮುಟ್ಟುಗಳ ಸಂಖ್ಯೆ ಹಾಗೂ ಜೀವಹಾನಿ ಪ್ರಮಾಣ ಎಷ್ಟು (ವರ್ಷಾವಾರು ಪ್ರಕರಣವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಕಾಡ್ಗಿಚ್ಚಿನಿಂದ ಕಾಡು ನಾಶವಾದ ಪ್ರಕರಣಗಳ ವಿವರ ಕೆಳಕಂಡಂತಿದೆ. ವರ್ಷ — ಪ್ರಕರಣಗಳ ಸಂಖ್ಯೆ 2018-19 — 408 2019-20 — 477 2020-21 — 876 ಒಟ್ಟು — 1761 ಕಳೆದ 3 ವರ್ಷಗಳಲ್ಲಿ ಕಾಡಿನಲ್ಲಿ ಉಂಟಾದ ಬೆಂಕಿಯು ನೆಲಮಟ್ಟದ ಬೆಂಕಿಯಾಗಿದ್ದು, ಯಾವುದೇ ಮರಮುಟ್ಟುಗಳು, ವನ್ಯಜೀವಿಯು ಸಾವನ್ನಪ್ಪಿರುವ ಬಗ್ಗೆ ವರದಿಯಾಗಿರುವುದಿಲ್ಲ.
ಆ)	ಕಾಡ್ಗಿಚ್ಚು ಉಂಟಾದ ಸಂದರ್ಭದಲ್ಲಿ ಅದನ್ನು ನಂದಿಸಲು ಇಲಾಖೆಯು ತುರ್ತಾಗಿ ಕೈಗೊಳ್ಳುವ ಕ್ರಮಗಳಾವುವು; ಕೇಂದ್ರೀಯ ಪ್ರಾಯೋಜಿತ ಬೆಂಕಿ ತಡೆ ಮತ್ತು ನಿರ್ವಹಣೆ ಯೋಜನೆಯು ಯಾವ ಯಾವ ಕಾರ್ಯಕ್ರಮಗಳನ್ನು ಒಳಗೊಂಡಿದೆ. ಈ ಯೋಜನೆಯಲ್ಲಿ ಮಾಡಲಾದ ವೆಚ್ಚವೆಷ್ಟು ಯೋಜನೆಯಲ್ಲಿ ವೆಚ್ಚ ಮಾಡಿದಾಗ್ಯೂ ಕಾಡ್ಗಿಚ್ಚನ್ನು ನಿಯಂತ್ರಿಸಲು ಸಾಧ್ಯವಾಗದಿರಲು ಕಾರಣವೇನು?	ಕಾಡಿನ ಬೆಂಕಿಯ ಘಟನೆಗಳನ್ನು ತಡೆಯಲು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. 1. ಕರ್ನಾಟಕ ಅರಣ್ಯ ಇಲಾಖೆಯು ಬೆಂಕಿಯ ಸಂದರ್ಭದಲ್ಲಿ ಬೆಂಕಿಯ ಮುಂಗಡ ಮೇಲ್ವಿಚಾರಣೆಗಾಗಿ ಭಾರತೀಯ ಅರಣ್ಯ ಸಮೀಕ್ಷೆ ಮತ್ತು ರಾಷ್ಟ್ರೀಯ ದೂರ ಸಂವೇದಿ ಏಜೆನ್ಸಿ, ಹೈದರಾಬಾದ್‌ನ ಸಹಯೋಗದೊಂದಿಗೆ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC) ಬೆಂಗಳೂರು ಸಹಯೋಗದೊಂದಿಗೆ "ಅರಣ್ಯ ಬೆಂಕಿ ಉಸ್ತುವಾರಿ ಮತ್ತು ವಿಶ್ಲೇಷಣೆ ಕೋಶ" ವನ್ನು ಸ್ಥಾಪಿಸಲಾಗಿದ್ದು, ಸದರಿ ಕೋಶದ ವತಿಯಿಂದ ಕಾಡ್ಗಿಚ್ಚನ್ನು ಪತ್ತೆಹಚ್ಚಲು ಉಪಗ್ರಹ ಚಿತ್ರಣಗಳು ಮತ್ತು ಮಾಹಿತಿ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಸದರಿ ತಂತ್ರಜ್ಞಾನವು ಕಾಡಿನ ಬೆಂಕಿಯನ್ನು ಪರಿಣಾಮಕಾರಿಯಾಗಿ ಮತ್ತು ಸಮಯೋಚಿತವಾಗಿ ನಿಯಂತ್ರಿಸಲು ಸಹಾಯ ಮಾಡುತ್ತದೆ.

ಕ್ರ. ಸಂ.	ಪ್ರಶ್ನೆ	ಉತ್ತರ
		2. ಆಯಕಟ್ಟಿನ ಸ್ಥಳಗಳಲ್ಲಿ ತಾತ್ಕಾಲಿಕ ಅಗ್ನಿಶಾಮಕ ಕೇಂದ್ರಗಳನ್ನು ಸ್ಥಾಪಿಸಲು ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ಅರಣ್ಯ ಇಲಾಖೆಯೊಂದಿಗೆ ಸಹಕರಿಸುತ್ತಿದೆ. 3. ಬೆಂಕಿ ಅವಘಡಗಳು ಸಂಭವಿಸುವ ಸ್ಥಳಗಳನ್ನು ಪತ್ತೆ ಹಚ್ಚಲು ಸೂಕ್ಷ್ಮ ಪ್ರದೇಶಗಳಲ್ಲಿ ವಾಚ್ ಟವರ್‌ಗಳನ್ನು ನಿರ್ಮಿಸಲಾಗಿದೆ. 4. ವೈರ್‌ಲೆಸ್ ಸೆಟ್‌ಗಳಂತಹ ಪರಿಣಾಮಕಾರಿ ಸಂವಹನ ಸಾಧನಗಳನ್ನು ಬಳಕೆ ಮಾಡಲಾಗುತ್ತಿದೆ. 5. ದೊಡ್ಡ ಬೆಂಕಿಯ ವಿಶೇಷ ಸಂದರ್ಭಗಳಲ್ಲಿ, ಭಾರತೀಯ ವಾಯುಪಡೆಯ ಹೆಲಿಕಾಪ್ಟರ್ ಗಳ ಸೇವೆಯನ್ನು ಪಡೆದು ಬೆಂಕಿಯನ್ನು ನಂದಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ. 6. ತುರ್ತು ಪರಿಸ್ಥಿತಿಗಳಲ್ಲಿ ಸೂಕ್ಷ್ಮ ಪ್ರದೇಶಗಳಲ್ಲಿ ಅಗ್ನಿ ಶಾಮಕ ಇಲಾಖೆಯ ನೆರವನ್ನು ಪಡೆಯಲು, ತಾತ್ಕಾಲಿಕ ಅಗ್ನಿ ಶಾಮಕ ಕೇಂದ್ರಗಳನ್ನು ಆಯಕಟ್ಟಿನ ಸ್ಥಳಗಳಲ್ಲಿ ಸ್ಥಾಪಿಸಲು ಪ್ರತಿವರ್ಷ ಅಗ್ನಿಶಾಮಕ ಇಲಾಖೆಗೆ ವನ್ಯಜೀವಿ ಪ್ರದೇಶಗಳಿಗೆ ಸಂಬಂಧಿಸಿದಂತೆ ರೂ. 50.00 ಲಕ್ಷಗಳನ್ನು ಮೀಸಲಿಟ್ಟು ಪಾವತಿಸಲಾಗುತ್ತಿದೆ. 7. 2019-20ನೇ ಸಾಲಿನಲ್ಲಿ "ಅರಣ್ಯ ಬೆಂಕಿ ಉಸ್ತುವಾರಿ ಮತ್ತು ವಿಶ್ಲೇಷಣೆ ಕೋಶ" ಸ್ಥಾಪಿಸಲು ರೂ.200.00 ಲಕ್ಷಗಳನ್ನು ಕರ್ನಾಟಕ ರಾಜ್ಯ ದೂರಸಂವೇದಿ ಅನ್ವಯಿಕ ಕೇಂದ್ರ (KSRSAC) ಬೆಂಗಳೂರು ರವರಿಗೆ ಪಾವತಿ ಮಾಡಲಾಗಿರುತ್ತದೆ. 8. ಅರಣ್ಯ ಪ್ರದೇಶದ ಅಗತ್ಯಕ್ಕೆ ತಕ್ಕಂತೆ ಬೆಂಕಿ ನಂದಿಸಲು ಬೆಂಕಿ ನಿಯಂತ್ರಣ ಕಾಮಗಾರಿಗಳನ್ನು ನಿರ್ವಹಿಸಲಾಗಿರುತ್ತದೆ. 9. ಕೇಂದ್ರ ಲೆಕ್ಕಶೀರ್ಷಿಕೆಯಡಿ ಅರಣ್ಯ ಪ್ರದೇಶದಲ್ಲಿ ಬೆಂಕಿ ನಿರ್ವಹಣೆ ಮಾಡಲು ಹೊಸದಾಗಿ ಬೆಂಕಿ ರೇಖೆಗಳನ್ನು ನಿರ್ಮಾಣ ಮಾಡುವುದು. ಹಳೆಯ ಬೆಂಕಿ ರೇಖೆಗಳನ್ನು ನಿರ್ವಹಣೆ ಮಾಡುವುದು. ಬೆಂಕಿ ಕಾವಲುಗಾರರನ್ನು ನಿಯೋಜಿಸುವುದು. ಮಣ್ಣು ಸಂರಕ್ಷಣಾ ಕೆಲಸಗಳನ್ನು ನಿರ್ವಹಿಸುವುದು (ಎಸ್‌ಎಂಸಿ). ಸಾರ್ವಜನಿಕರಿಗೆ ಅರಿವು ಮೂಡಿಸುವುದು ಮತ್ತು ಮುಂಚೋಣಿ ಸಿಬ್ಬಂದಿಗೆ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>10. ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಲ್ಲಿ ವನ್ಯಜೀವಿ ಪ್ರದೇಶಗಳನ್ನು ಹೊರತು ಪಡಿಸಿ ಇತರೆ ಅರಣ್ಯ ಪ್ರದೇಶಗಳಲ್ಲಿ ಬೆಂಕಿ ರಕ್ಷಣೆಗೆ ವೆಚ್ಚ ಮಾಡಲಾದ ಮೊತ್ತದ ವಿವರ ಕೆಳಕಂಡಂತಿದೆ.

<table>
<tr><th>ವರ್ಷ</th><th>ಮೊಬಲಗು (ರೂಲಕ್ಷಗಳಲ್ಲಿ)</th></tr>
<tr><td>2018-19</td><td>291.170</td></tr>
<tr><td>2019-20</td><td>227.546</td></tr>
<tr><td>2020-21</td><td>366.025</td></tr>
<tr><td>ಒಟ್ಟು</td><td>884.741</td></tr>
</table></td></tr>
<tr><td>ಇ)</td><td>ರಾಜ್ಯದಲ್ಲಿ ನೈಸರ್ಗಿಕವಾಗಿ ಮತ್ತು ಮಾನವನ ಮಧ್ಯ ಪ್ರವೇಶದಿಂದ ಉಂಟಾದ ಕಾಡ್ಗಿಚ್ಚು ಪ್ರಕರಣಗಳ ಸಂಖ್ಯೆ ಎಷ್ಟು? ಈವರೆಗೆ ಉಂಟಾದ ಕಾಡ್ಗಿಚ್ಚು ಪ್ರಕರಣಗಳ ಕುರಿತು ಇಲಾಖೆಯಿಂದ ತನಿಖೆ ನಡೆಸಲಾಗಿದೆಯೇ ಇವುಗಳ ವರದಿಯ ಸಾರಂಶವೇನು: ಕಳ್ಳಸಾಗಾಣಿಕೆ ಮತ್ತು ಇನ್ನಿತರ ಅವ್ಯವಹಾರಗಳನ್ನು ಮುಚ್ಚಿ ಹಾಕಲು ಉದ್ದೇಶ ಪೂರ್ವಕವಾಗಿ ಈ ಕಾಡ್ಗಿಚ್ಚನ್ನು ಅದರ ಹಿತಾಸಕ್ತಿದಾರರು ಬಳಸುತ್ತಿರುವುದರ ಹಿನ್ನಲೆಯಲ್ಲಿ ಇಲಾಖೆಯಿಂದ ತನಿಖೆ ನಡೆಸಲಾಗಿದೆಯೇ?</td><td>ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕಾಡ್ಗಿಚ್ಚು ಪ್ರಕರಣಗಳ ವಿವರ ಕೆಳಕಂಡಂತಿದೆ.

<table>
<tr><th>ವರ್ಷ</th><th>ಪ್ರಕರಣಗಳ ಸಂಖ್ಯೆ</th></tr>
<tr><td>2018-19</td><td>408</td></tr>
<tr><td>2019-20</td><td>477</td></tr>
<tr><td>2020-21</td><td>876</td></tr>
<tr><td>ಒಟ್ಟು</td><td>1761</td></tr>
</table>
ಇದುವರೆಗೆ ಉಂಟಾದ ಕಾಡ್ಗಿಚ್ಚು ಪ್ರಕರಣಗಳ ಕುರಿತು ಇಲಾಖೆಯಿಂದ ತನಿಖೆ ನಡೆಸಿ ಕರ್ನಾಟಕ ಅರಣ್ಯ ಕಾಯ್ದೆ, 1963 ಹಾಗೂ ನಿಯಮ 1969 ಗಳನ್ವಯ ಪ್ರಕರಣ ದಾಖಲಿಸಿ ಕ್ರಮಕ್ಕೆಗೊಳ್ಳಲಾಗುತ್ತಿದೆ.</td></tr>
</table>

ಸಂಖ್ಯೆ: ಅಪಜೀ 235 ಎಫ್‌ಡಬ್ಲ್ಯೂಎಲ್ 2021

(ಉಮೇಶ್ ವಿ.ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಸಚಿವರು